2070/1401

**I Semester 3 Year LL.B./V Semester 5 Year B.A.LL.B. (Maj.-Min. System)/B.B.A.LL.B./ B.A.LL.B./B.Com.LL.B. Examination, June/July 2025 (Even Sem.)**

**CONSTITUTIONAL LAW – I**

Duration : 3 Hours Max. Marks : 100

**Instructions :**
1. **Answer Q. No. 9 and any five of the remaining questions.**
2. **Q. No. 9 carries 20 marks and the remaining questions carry 16 marks each.**
3. **Answer should be written either in English or Kannada completely.**

Q. No. 1. Explain the salient features of Constitution of India. Marks : 16

ಭಾರತ ಸಂವಿಧಾನದ ಪ್ರಮುಖ ಲಕ್ಷಣಗಳನ್ನು ವಿವರಿಸಿ.

Q. No. 2. Examine the scope of 'other authorities' under Article 12 of the Constitution. Marks : 16

ಸಂವಿಧಾನದ ಅನುಚ್ಛೇದ 12 ರಲ್ಲಿನ ''ಇತರೆ ಪ್ರಾಧಿಕಾರಗಳು'' ಎಂಬುದರ ವ್ಯಾಪ್ತಿಯನ್ನು ಪರಿಶೀಲಿಸಿ.

Q. No. 3. Article 14 permits reasonable classification but prohibits class legislation. Explain the test and grounds of classification with the help of decided cases. Marks : 16

ಅನುಚ್ಛೇದ 14 ಸಮಂಜಸವಾದ ವರ್ಗೀಕರಣವನ್ನು ಅನುಮತಿಸುತ್ತದೆ ಆದರೆ ವರ್ಗ ಶಾಸನವನ್ನು ನಿಷೇಧಿಸುತ್ತವೆ. ನಿರ್ಧರಿತ ಪ್ರಕರಣಗಳ ಸಹಾಯದಿಂದ ವರ್ಗೀಕರಣದ ಪರೀಕ್ಷೆ ಮತ್ತು ಆಧಾರಗಳನ್ನು ವಿವರಿಸಿ.

Q. No. 4. Discuss the provision of Article 16 of the Indian Constitution relating to opportunity for all citizens in matters of employment or appointment under the State. Marks : 16

ರಾಜ್ಯದ ಉದ್ಯೋಗ ಅಥವಾ ನೇಮಕಾತಿಯಲ್ಲಿ ಎಲ್ಲಾ ಪ್ರಜೆಗಳಿಗೂ ಸಮಾನ ಅವಕಾಶದ ಬಗ್ಗೆ ಭಾರತೀಯ ಸಂವಿಧಾನದ ಅನುಚ್ಛೇದ 16 ರ ನಿಬಂಧನೆಗಳನ್ನು ಚರ್ಚಿಸಿ.

Q. No. 5. Explain the right to freedom of speech and expression with the help of decided cases. Marks : 16

ವಾಕ್ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ನಿರ್ಧರಿತ ಪ್ರಕರಣಗಳ ಸಹಾಯದೊಂದಿಗೆ ವಿವರಿಸಿರಿ.

Q. No. 6. "No person shall be deprived of his life or personal liberty except according to the procedure established by law". Explain this statement with reference to various facts of life and liberty. Marks : 16

''ಕಾನೂನುಬದ್ಧ ಸುಸ್ಥಾಪಿಕ ಪ್ರಕ್ರಿಯೆಗಳಿಗೆ ಅನುಗುಣವಾಗಿಯಲ್ಲದೆ, ಯಾವುದೇ ವ್ಯಕ್ತಿಯ ಜೀವ ಅಥವಾ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಲೋಪವನ್ನು ಉಂಟು ಮಾಡತಕ್ಕದ್ದಲ್ಲ.'' ಜೀವನ ಮತ್ತು ಸ್ವಾತಂತ್ರ್ಯದ ವಿವಿಧ ಅಂಶಗಳನ್ನು ಉಲ್ಲೇಖಿಸಿ ಈ ಹೇಳಿಕೆಯನ್ನು ವಿವರಿಸಿ.

Q. No. 7. Discuss the cultural and educational rights of minorities under the Indian Constitution. Marks : 16

ಭಾರತೀಯ ಸಂವಿಧಾನದಲ್ಲಿ ಅಲ್ಪಸಂಖ್ಯಾತರಿಗೆ ಇರುವ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಹಕ್ಕುಗಳನ್ನು ಚರ್ಚಿಸಿ.

P.T.O.

Q. No. 8. Write a short note on **any two** of the following. Marks : 2×8=16

ಕೆಳಗಿನ ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ.

(a) Right to property

ಆಸ್ತಿಯ ಹಕ್ಕು

(b) Doctrine of severability

ವಿಂಗಡಣಾ ಸಿದ್ಧಾಂತ

(c) Freedom of movement.

ಚಲನಾ ಸ್ವಾತಂತ್ರ್ಯ.

Q. No. 9. Solve **any two** of the following problems. Marks : 2×10=20

ಕೆಳಗಿನ ಯಾವುದಾದರೂ **ಎರಡು** ಸಮಸ್ಯೆಗಳನ್ನು ಬಗೆಹರಿಸಿ.

(a) 'X' is a person of Indian origin residing in Sweden and he got a foreign citizenship. Can he claim Indian overseas citizenship also ?

'X' ಎಂಬುವವನು ಭಾರತ ದೇಶದ ಮೂಲ ನಿವಾಸಿಯಾಗಿದ್ದು, ಸ್ವೀಡನ್‌ನ ನಾಗರೀಕತ್ವವನ್ನು ಪಡೆದು ನೆಲೆಸಿರುತ್ತಾನೆ. ಆತನು ಭಾರತದ ಅಧಿವಾಸಿ ನಾಗರೀಕತ್ವವನ್ನು ಸಹ ಪಡೆಯಬಹುದೇ ?

(b) The petitioner who were poor hawkers were carrying on business on the pavements of roads of West Bengal. They contended that West Bengal Municipal Corporation had permitted them to carry on business and later they refused to carry on business. Hence the petitioner files a case against the action of the West Bengal Corporation stating that the action of municipality is unconstitutional. Decide.

ಬಡ ಬೀದಿ ವ್ಯಾಪಾರಿಗಳಾದ ಅರ್ಜಿದಾರರು ಪಶ್ಚಿಮ ಬಂಗಾಳದ ಬೀದಿಗಳಲ್ಲಿ ವ್ಯಾಪಾರವನ್ನು ಮಾಡುತ್ತಿದ್ದರು. ಪಶ್ಚಿಮ ಬಂಗಾಳದ ನಗರಸಭೆಯವರು ಮೊದಲು ಅನುಮತಿ ನೀಡಿ ನಂತರ ವ್ಯಾಪಾರ ನಡೆಸಲು ವಿರೋಧಿಸಿತು. ಅರ್ಜಿದಾರರು ನಗರಸಭೆಯ ವಿರುದ್ಧ ಮೊಕದ್ದಮೆಯನ್ನು ಹೂಡಿದರು. ನಗರಸಭೆಯ ಈ ಕ್ರಮ ಅಸಾಂವಿಧಾನಿಕವಾಗಿದೆಯೇ ? ತೀರ್ಮಾನಿಸಿ.

(c) The Air India Regulations provide conditions of retirement of a Air hostess from the service of Air India either upon attaining the age of 35 years or on marriage if it takes place within four years of service or on first pregnancy whichever is earlier. An Air hostess challenges this Regulation in the Supreme Court. Decide.

ಭಾರತೀಯ ನಾಗರಿಕ ವಿಮಾನಯಾನದಲ್ಲಿ ಒಬ್ಬ ಏರ್ ಹೊಸ್ಟೆಸ್‌ಳು (ಗಗನಸಖಿ) ಸೇವೆಯಿಂದ ಯಾವಾಗ ನಿವೃತ್ತಿ ಹೊಂದುತ್ತಾಳೆಂಬುದರ ಬಗ್ಗೆ ಅದರ ನಿಯಮಾವಳಿಗಳ ಪ್ರಕಾರ ನಿವೃತ್ತಿಯು 35 ವರ್ಷಗಳಾದ ನಂತರವಾಗಲಿ ಅಥವಾ ಕೆಲಸಕ್ಕೆ ಸೇರಿದ ನಾಲ್ಕು ವರ್ಷಕ್ಕೆ ಪೂರ್ವದಲ್ಲಿಯೇ ಮದುವೆಯಾದಲ್ಲಿ ಅಥವಾ ಅವಳು ಮೊದಲು ಗರ್ಭಿಣಿಯಾದಾಗ ಇದರಲ್ಲಿ ಯಾವುದು ಮೊದಲೋ ಅದರಂತೆ ಅವಳು ನಿವೃತ್ತಿ ಹೊಂದಬೇಕು. ಏರ್ ಹೊಸ್ಟೆಸ್‌ಳು (ಗಗನಸಖಿ) ಈ ನಿಯಮಾವಳಿಗಳನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸುತ್ತಾಳೆ. ನಿರ್ಣಯಿಸಿರಿ.

2070/1401/1548/1616/1716

**V Semester 5 Years B.A.LL.B. (Maj.-Min. System)/B.B.A.LL.B./B.Com.LL.B./ I Semester 3 Year LL.B. Examination, January/February 2025 (Odd Sem.)**

**CONSTITUTIONAL LAW – I**

Duration : 3 Hours　　　　Max. Marks : 100

**Instructions : 1. Answer Q. No. 9 and any five of the remaining.**
**2. Q. No. 9 carries 20 marks and the remaining questions carry 16 marks each.**
**3. Answers should be written either in English or Kannada completely.**

Q. No. 1. Discuss the legal position and significance of the 'preamble' of the Indian Constitution with decided cases. Marks : 16
ನಿರ್ಧರಿತ ಪ್ರಕರಣಗಳ ಸಹಿತ ಭಾರತೀಯ ಸಂವಿಧಾನದ ಪ್ರಸ್ತಾವನೆಯ ಕಾನೂನು ಸ್ಥಿತಿ ಮತ್ತು ಮಹತ್ವದ ಬಗ್ಗೆ ಚರ್ಚಿಸಿ.

Q. No. 2. Discuss the principles of equality as laid under Art.14 of the Indian Constitution with decided case laws. Marks : 16
ಭಾರತೀಯ ಸಂವಿಧಾನದ ಅನುಚ್ಛೇದ 14ರಲ್ಲಿ ಹೇಳಿರುವ ಸಮಾನತೆಯ ತತ್ವಗಳನ್ನು ನಿರ್ಧರಿತ ಪ್ರಕರಣಗಳೊಂದಿಗೆ ಚರ್ಚಿಸಿರಿ.

Q. No. 3. What is meant by citizenship ? Explain the mode of acquisition and termination of citizenship. Marks : 16
ಪೌರತ್ವದ ಅರ್ಥವೇನು ? ಪೌರತ್ವದ ಸ್ವಾಧೀನ ಮತ್ತು ಮುಕ್ತಾಯದ ವಿಧಾನಗಳನ್ನು ವಿವರಿಸಿ.

Q. No. 4. Discuss the rights of minorities to establish and manage the educational institutions. Marks : 16
ಅಲಸಂಖ್ಯಾತರ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವ ಮತ್ತು ಅವುಗಳನ್ನು ನಿರ್ವಹಿಸುವ ಹಕ್ಕನ್ನು ಚರ್ಚಿಸಿ.

Q. No. 5. Examine the freedom of religion guaranteed under the Indian Constitution. Marks : 16
ಭಾರತೀಯ ಸಂವಿಧಾನದಲ್ಲಿ ನೀಡಲಾದ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಪರೀಕ್ಷಿಸಿ.

Q. No. 6. Discuss the right to freedom of speech and expression with the help of the decided cases. Marks : 16
ನಿರ್ಣಯಿಸಲ್ಪಟ್ಟ ಪ್ರಕರಣಗಳ ಸಹಾಯದಿಂದ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಚರ್ಚಿಸಿರಿ.

Q. No. 7. Explain the various kinds of writs provided under the Constitution of India. Marks : 16

ಭಾರತದ ಸಂವಿಧಾನದಲ್ಲಿ ಕೊಟ್ಟಿರುವ ವಿವಿಧ ರೀತಿಯ ರಿಟ್‌ಗಳನ್ನು ವಿವರಿಸಿರಿ.

Q. No. 8. Write a note on **any two** of the following : Marks : 2×8=16

ಈ ಕೆಳಗಿನ ಯಾವುದಾದರೂ ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ :

(a) Federal features of the Indian Constitution.

ಭಾರತ ಸಂಯುಕ್ತ ಸಂವಿಧಾನದ ಲಕ್ಷಣಗಳು.

(b) Abolition of untouchability.

ಅಸ್ಪೃಶ್ಯತೆಯ ನಿರ್ಮೂಲನೆ.

(c) Fundamental Duties.

ಮೂಲಭೂತ ಕರ್ತವ್ಯಗಳು.

Q. No. 9. Solve **any two** of the following problems : Marks : 2×10=20

ಈ ಕೆಳಗಿನ ಯಾವುದಾದರೂ ಎರಡು ಸಮಸ್ಯೆಗಳನ್ನು ಬಗೆಹರಿಸಿ :

(a) The State Government issued an order under Art.15(4) of the Constitution reserving 68% of seats to backward and more backward classes and 32% seats made available to the merit pool in the medical and engineering colleges. The validity of the order was challenged by a student who had secured more marks than these admitted under the order. Decide.

ಸಂವಿಧಾನದ ಅನುಚ್ಛೇದ 15(4)ರ ಅಡಿಯಲ್ಲಿ ವೈದ್ಯಕೀಯ ಮತ್ತು ತಾಂತ್ರಿಕ ಮಹಾವಿದ್ಯಾಲಯಗಳಲ್ಲಿ ಶೇಕಡಾ 68% ಸ್ಥಳಗಳನ್ನು ಹಿಂದುಳಿದ ಜಾತಿ ಮತ್ತು ಅತೀ ಹಿಂದುಳಿದ ಜಾತಿಗಳಿಗೆ ಮೀಸಲಾತಿ ನೀಡಿ, ಉಳಿದ 32% ಸ್ಥಳಗಳನ್ನು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ದೊರಕುವಂತೆ ಸರಕಾರ ಆಜ್ಞೆ ಹೊರಡಿಸಿತು. ಆಜ್ಞೆಯ ಸಿಂಧುತ್ವವನ್ನು ಒಬ್ಬ ಪ್ರತಿಭಾವಂತ ವಿದ್ಯಾರ್ಥಿಯು ಪ್ರಶ್ನಿಸಿದನು. ನಿರ್ಧರಿಸಿರಿ.

(b) Ramkumar a producer of a film applied to the censor board for "U" certificate but got "A" certificate as per the Cinematography Act, he challenges the Act. Decide.

ರಾಮ್‌ಕುಮಾರ್ ಎಂಬ ಒಬ್ಬ ಚಲನಚಿತ್ರ ನಿರ್ಮಾಪಕನು ಸೆನ್ಸಾರ್ ಬೋರ್ಡಿಗೆ ತನ್ನ ಚಿತ್ರಕ್ಕೆ "ಯು" ಸರ್ಟಿಫಿಕೇಟಿಗೆ ಅರ್ಜಿ ಹಾಕಿದನು. ಆದರೆ "ಯು"ದ ಬದಲು "ಎ" ಎಂದು ಅವರ ಚಲನಚಿತ್ರಕ್ಕೆ ಸರ್ಟಿಫಿಕೇಟನ್ನು ಸಿನಿಮಾಟೋಗ್ರಾಫ್ ಶಾಸನದ ಪ್ರಕಾರ ಕೊಡಲಾಯಿತು. ಅವನು ಈ ಶಾಸನವನ್ನು ಪ್ರಶ್ನಿಸುತ್ತಾನೆ. ನಿರ್ಣಯಿಸಿರಿ.

(c) "The International Crop Research Institute" is an international organisation that has set up as a non-profit research and training center to help developing countries alleviate rural poverty and hunger in various ways. Ram an employee was terminated. Consequently, he filed a writ under Art. 32 before Supreme Court of India. Is the writ maintainable against the International Crop Research Institute as 'State' under Art. 12 of the constitution of India ? Decide.

"ಅಂತಾರಾಷ್ಟ್ರೀಯ ಬೆಳೆ ಸಂಶೋಧನಾ ಸಂಸ್ಥೆಯು" ಒಂದು ಅಂತಾರಾಷ್ಟ್ರೀಯ ಸಂಘವಾಗಿದ್ದು, ಇದು ವಿವಿಧ ರೀತಿಯಲ್ಲಿ ಗ್ರಾಮೀಣ ಬಡತನ ಮತ್ತು ಹಸಿವೆಯನ್ನು ನಿವಾರಿಸುವ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಸಹಾಯ ಮಾಡಲು, ಲಾಭರಹಿತ ಮತ್ತು ತರಬೇತಿ ಕೇಂದ್ರವಾಗಿ ಸ್ಥಾಪಿಸಲಾಗಿದೆ. ರಾಮ್ ಎಂಬ ಉದ್ಯೋಗಿಯನ್ನು ಈ ಸಂಸ್ಥೆಯು ವಜಾ ಮಾಡಿದೆ. ಉದ್ಯೋಗದಿಂದ ವಜಾ ಮಾಡಿದ ಪರಿಣಾಮದಿಂದಾಗಿ ರಾಮ್‌ನು ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ರಿಟ್‌ನ್ನು ಅನುಚ್ಛೇದ 32ರ ಅಡಿಯಲ್ಲಿ ಸಲ್ಲಿಸಿದನು. ಈ ಅಂತಾರಾಷ್ಟ್ರೀಯ ಬೆಳೆ ಸಂಶೋಧನಾ ಸಂಸ್ಥೆಯು ಭಾರತೀಯ ಸಂವಿಧಾನ ಅನುಚ್ಛೇದ 12ರ ಅಡಿಯಲ್ಲಿ 'ರಾಜ್ಯ' ಎಂದು ಈ ಸಂಸ್ಥೆಯ ವಿರುದ್ಧ ರಿಟ್‌ನ್ನು ನಿರ್ವಹಿಸಬಹುದೇ ? ತೀರ್ಮಾನಿಸಿ.

---

2070

**V Semester 5 Yrs. B.A. LL.B. (Maj.-Min. System)/B.B.A. LL.B./ B.Com. LL.B. (Even Sem.) Examination, Aug./Sept. 2024**
**CONSTITUTIONAL LAW – I**

Duration : 3 Hours Max. Marks : 100

**Instructions : 1. Answer Q. No. 9 and any five of the remaining.**
**2. Q. No. 9 carries 20 marks and the remaining questions carry 16 marks each.**
**3. Answer should be written either in English or in Kannada completely.**

Q. No. 1. Explain the salient features of Indian Constitution. Marks : 16
ಭಾರತ ಸಂವಿಧಾನದ ಪ್ರಮುಖ ಲಕ್ಷಣಗಳನ್ನು ವಿವರಿಸಿ.

Q. No. 2. Explain 'State' under Article 12 of the Indian Constitution with decided cases. Marks : 16
ನಿರ್ಧರಿತ ಪ್ರಕರಣಗಳೊಂದಿಗೆ ಭಾರತ ಸಂವಿಧಾನದ ಅನುಚ್ಛೇದ 12ರಲ್ಲಿ 'ರಾಜ್ಯ'ವನ್ನು ವಿವರಿಸಿ.

Q. No. 3. Explain 'Equality before law' and 'Equal protection of law' under Indian Constitution. Marks : 16
ಭಾರತ ಸಂವಿಧಾನದಲ್ಲಿ 'ಕಾನೂನಿನ ಮುಂದೆ ಸಮಾನತೆ' ಮತ್ತು 'ಸಮಾನ ಕಾನೂನಿನ ರಕ್ಷಣೆ'ಯನ್ನು ವಿವರಿಸಿ.

Q. No. 4. "No person shall be deprived of his life or personal liberty except according to procedure established by law." Explain with decided cases. Marks : 16
"ವ್ಯಕ್ತಿಯ ಜೀವನ ಅಥವಾ ವೈಯಕ್ತಿಕ ಸ್ವಾತಂತ್ರ್ಯವನ್ನು ಕಾನೂನುಬದ್ಧ ಪ್ರಕ್ರಿಯೆಗಳಲ್ಲಿದೆ ಹರಣ ಮಾಡುವಂತಿಲ್ಲ." ನಿರ್ಧರಿತ ಪ್ರಕರಣಗಳೊಂದಿಗೆ ವಿವರಿಸಿ.

Q. No. 5. Explain the powers and functions of President of India. Marks : 16
ಭಾರತದ ರಾಷ್ಟ್ರಪತಿಗಳ ಅಧಿಕಾರಗಳು ಮತ್ತು ಕಾರ್ಯಗಳನ್ನು ವಿವರಿಸಿ.

P.T.O.

Q. No. 6. What is money bill ? Explain the procedure of passing of money bills, ordinary bills and financial bills. Marks : 16

ವಿತ್ತೀಯ ಮಸೂದೆ ಎಂದರೇನು ? ವಿತ್ತೀಯ ಮಸೂದೆ, ಸಾಮಾನ್ಯ ಮಸೂದೆ ಮತ್ತು ಹಣಕಾಸಿನ ಮಸೂದೆಗಳನ್ನು ಅಂಗೀಕರಿಸುವ ಪ್ರಕ್ರಿಯೆಗಳನ್ನು ವಿವರಿಸಿ.

Q. No. 7. Explain state emergency under Indian Constitution. Marks : 16

ಭಾರತ ಸಂವಿಧಾನದ ಅಡಿಯಲ್ಲಿ ರಾಜ್ಯ ತುರ್ತುಪರಿಸ್ಥಿತಿಯನ್ನು ವಿವರಿಸಿ.

Q. No. 8. Write a short note on **any two** of the following : Marks : 2×8=16

ಕೆಳಗಿನ ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

(a) Election Commission

ಚುನಾವಣಾ ಆಯೋಗ

(b) Governor

ರಾಜ್ಯಪಾಲರು

(c) State liability.

ಸರ್ಕಾರದ ಹೊಣೆಗಾರಿಕೆ.

Q. No. 9. Solve **any two** of the following problems : Marks : 2×10=20

ಕೆಳಗಿನ ಯಾವುದಾದರೂ **ಎರಡು** ಸಮಸ್ಯೆಗಳನ್ನು ಇತ್ಯರ್ಥ ಪಡಿಸಿ.

(a) Three children belonging to Jehovab's witnesses were expelled from the school for refusing to sing the National Anthem. They challenged it as violative of their Religious right. Decide.

ಜಿಹೊವಾಬ್‌ಗೆ ಸೇರಿದ ಮೂರು ಮಕ್ಕಳನ್ನು ರಾಷ್ಟ್ರಗೀತೆ ಹಾಡಲು ನಿರಾಕರಿಸಿದ್ದಕ್ಕಾಗಿ ಶಾಲೆಯಿಂದ ಹೊರಹಾಕಲಾಗಿದೆ. ಅವರು ತಮ್ಮ ಧಾರ್ಮಿಕ ಹಕ್ಕಿನ ಉಲ್ಲಂಘನೆಯಾಗುತ್ತಿದೆ ಎಂದು ಪ್ರಶ್ನಿಸಿದ್ದಾರೆ. ನಿರ್ಧರಿಸಿ.

(b) Mr. 'X' came to India in 1938. He went to Iraq in 1945. On return, he was registered as a foreigner and several times his stay in India was extended. In 1957 his request

to extend the stay period was refused. He contended that he must be registered as a citizen of India under Article 5. Decide.

ಮಿ. 'X' ಎನ್ನುವವನು 1938ರಲ್ಲಿ ಭಾರತಕ್ಕೆ ಬಂದಿದ್ದ. ಅವನು 1945 ರಲ್ಲಿ ಇರಾಕ್‌ಗೆ ಹೋಗುತ್ತಾನೆ. ಮರಳಿ ಬಂದಾಗ ಅವನು ವಿದೇಶಿಗ ಎಂದು ತನ್ನ ಹೆಸರನ್ನು ನೊಂದಾಯಿಸುತ್ತಾನೆ ಮತ್ತು ಹಲವು ಬಾರಿ ಅವನು ಭಾರತದಲ್ಲಿ ತಂಗುವುದನ್ನು ವಿಸ್ತರಿಸಲಾಗುತ್ತದೆ. 1957ರಲ್ಲಿ ಅವನು ಭಾರತದಲ್ಲಿ ತಂಗುವುದಕ್ಕೆ ಸಲ್ಲಿಸಿದ ಮನವಿಯನ್ನು ತಿರಸ್ಕರಿಸಲಾಗುತ್ತದೆ. ಅವನು ಅನುಚ್ಛೇದ 5ರಡಿಯಲ್ಲಿ ತಾನು ಭಾರತದ ಪ್ರಜೆಯಾಗಿ ನೊಂದಾಯಿಸಿಕೊಳ್ಳಲು ಅರ್ಹನಿದ್ದೇನೆ ಎಂದು ಪ್ರತಿಪಾದಿಸುತ್ತಾನೆ. ನಿರ್ಧರಿಸಿ.

(c) A Tea Company carried on the business of growing tea and exporting it to Calcutta via Assam. While passing through Assam the tea was levied tax by the Assam Tax Act. The Tea Company challenge it as unconstitutional. Decide.

ಒಂದು ಟೀ ಕಂಪನಿಯು ಟೀ ಬೆಳೆದು ಅಸ್ಸಾಂ ಮೂಲಕ ಕಲ್ಕತ್ತಾಕ್ಕೆ ರಫ್ತು ಮಾಡುವ ವ್ಯಾಪಾರವನ್ನು ಮಾಡುತ್ತಿರುತ್ತದೆ. ಆ ಟೀಯು ಕಲ್ಕತ್ತಾಗೆ ಅಸ್ಸಾಂ ಮುಖಾಂತರ ಹೋಗಬೇಕಾಗುವಾಗ ಅಸ್ಸಾಂ ಸರ್ಕಾರವು ತನ್ನ ತೆರಿಗೆ ಕಾಯ್ದೆ ಅಡಿಯಲ್ಲಿ ಆ ಟೀಗೆ ತೆರಿಗೆ ಹಾಕುತ್ತದೆ. ಟೀ ಕಂಪೆನಿಯು ಇದು ಸಂವಿಧಾನ ಬಾಹಿರವಾಗಿದೆ ಎಂದು ಪ್ರಶ್ನಿಸುತ್ತಿದೆ. ನಿರ್ಧರಿಸಿ.

---

2070

**V Semester 5 Year B.Com. LL.B./B.B.A. LL.B./B.A. LL.B.**
**(Maj. – Min. – System) Examination, March/April 2024 (Odd Sem.)**
**CONSTITUTIONAL LAW – I**

Duration : 3 Hours Max. Marks : 100

**Instructions : 1. Answer Q. No. 9 and any five of the remaining questions.**
**2. Q. No. 9 carries 20 marks and the remaining questions carry 16 marks each.**
**3. Answers should be written either in English or Kannada completely.**

Q. No. 1. Explain the nature and special features of the Constitution of India. Marks : 16

ಭಾರತ ಸಂವಿಧಾನದ ಸ್ವರೂಪ ಮತ್ತು ವಿಶಿಷ್ಟ ಲಕ್ಷಣಗಳನ್ನು ವಿವರಿಸಿ.

Q. No. 2. Discuss in brief the fundamental freedoms guaranteed to the citizens under Article 19 of the Constitution of India. Marks : 16

ಭಾರತ ಸಂವಿಧಾನದ ಅನುಚ್ಛೇದ 19 ರಲ್ಲಿ ನಾಗರೀಕರಿಗಿರುವ ಮೂಲಭೂತ ಸ್ವಾತಂತ್ರ್ಯದ ಹಕ್ಕುಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿರಿ.

Q. No. 3. Narrate the safeguards available to the accused persons under Article 20 of the Constitution of India. Marks : 16

ಭಾರತ ಸಂವಿಧಾನದ ಅನುಚ್ಛೇದ 20 ರಲ್ಲಿ ಆಪಾದಿತ ವ್ಯಕ್ತಿಗಳಿಗೆ ಇರುವ ರಕ್ಷಣೆಗಳನ್ನು ವಿವರಿಸಿ.

Q. No. 4. Examine the freedom of religion guaranteed under the Indian Constitution. Marks : 16

ಭಾರತ ಸಂವಿಧಾನದಲ್ಲಿ ನೀಡಲಾದ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಪರೀಕ್ಷಿಸಿ.

Q. No. 5. Discuss the Rights of Minorities under the provisions of Articles 29 and 30 of the Indian Constitution. Marks : 16

ಭಾರತ ಸಂವಿಧಾನದ 29 ಮತ್ತು 30 ನೇ ಅನುಚ್ಛೇದಗಳ ಅನ್ವಯ ಅಲ್ಪಸಂಖ್ಯಾತರಿಗೆ ದೊರೆಯುವ ಹಕ್ಕುಗಳನ್ನು ಕುರಿತು ಚರ್ಚಿಸಿ.

Q. No. 6. Examine the significance of Directive Principles of State Policy. Marks : 16

ರಾಜ್ಯ ನಿರ್ದೇಶಕ ತತ್ವಗಳ ಪ್ರಾಮುಖ್ಯತೆಯನ್ನು ಪರೀಕ್ಷಿಸಿ.

Q. No. 7. Explain the various types of writs contemplated under the Indian Constitution. Marks : 16

ಭಾರತದ ಸಂವಿಧಾನದಲ್ಲಿ ಪರಿಗಣಿಸಲ್ಪಟ್ಟ ವಿವಿಧ ರೀತಿಯ ರಿಟ್‌ಗಳನ್ನು ವಿವರಿಸಿ.

Q. No. 8. Write short note on **any two** of the following : Marks : 8×2=16

ಕೆಳಗಿನ ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

(a) Preamble.

ಪ್ರಸ್ತಾವನೆ.

(b) Citizenship.

ಪೌರತ್ವ.

(c) Abolition of untouchability.

ಅಸ್ಪೃಶ್ಯತೆಯ ನಿರ್ಮೂಲನೆ.

Q. No. 9. Solve **any two** of the following problems with reasons : Marks : 10×2=20

ಕೆಳಗಿನ ಯಾವುದಾದರೂ **ಎರಡಕ್ಕೆ** ಕಾರಣಗಳೊಂದಿಗೆ ಪರಿಹಾರ ಸೂಚಿಸಿರಿ :

(a) 'X' a student is rusticated from the school on the ground that he has refused to sing the National Anthem. Can 'X' challenge it ?

'ಎಕ್ಸ್' ಎನ್ನುವ ವಿದ್ಯಾರ್ಥಿಯು ರಾಷ್ಟ್ರಗೀತೆಯನ್ನು ಹಾಡಲು ನಿರಾಕರಿಸಿದನು ಎನ್ನುವ ಕಾರಣಕ್ಕಾಗಿ ಆತನನ್ನು ಶಾಲೆಯಿಂದ ಹೊರ ಹಾಕಲಾಗುತ್ತದೆ. 'ಎಕ್ಸ್'ನು ಅದನ್ನು ಪ್ರಶ್ನಿಸಬಹುದೇ ?

(b) After due consideration and in order to provide employment opportunities to younger sections of the society, the government by passing Public Employment (Regulations of Conditions of Service) Act reduced the age of retirement of all government employees from 60 to 58 years. This was challenged as Violative of Article 14 of the Constitution. Decide.

ಕಾರಣ ಪರಿಗಣನೆಯ ನಂತರ ಮತ್ತು ಸಮಾಜದ ಕಿರಿಯ ವಿಭಾಗಗಳಿಗೆ ಉದ್ಯೋಗಾವಕಾಶಗಳನ್ನು ಒದಗಿಸುವ ಸಲುವಾಗಿ ಸರ್ಕಾರವು ಸಾರ್ವಜನಿಕ ಉದ್ಯೋಗ (ಸೇವಾ ನಿಯಮಗಳ ನಿಯಂತ್ರಣ) ಕಾಯಿದೆ ಹಾದುಹೋಗುವ ಮೂಲ ಸರ್ಕಾರಿ ನೌಕರರ ನಿವೃತ್ತಿಯ ವಯಸ್ಸನ್ನು 60 ರಿಂದ 58 ವರ್ಷಗಳಿಗೆ ಕಡಿಮೆ ಮಾಡಿತು. ಇದನ್ನು ಸಂವಿಧಾನದ 14 ನೇ ವಿಧಿಯ ಉಲ್ಲಂಘನೆ ಎಂದು ಪ್ರಶ್ನಿಸಲಾಯಿತು. ತೀರ್ಮಾನಿಸಿ.

(c) A State passes a law requiring the "Archakas" of temples to conduct worship in the Vernacular language instead of Sanskrit. Is it valid ?

ಒಂದು ರಾಜ್ಯವು ತನ್ನ ರಾಜ್ಯದಲ್ಲಿರುವ ದೇವಾಲಯಗಳ 'ಅರ್ಚಕರು' ಸಂಸ್ಕೃತದ ಬದಲಾಗಿ ಪ್ರಾದೇಶಿಕ ಭಾಷೆಯಲ್ಲಿಯೇ ಪೂಜೆ ನೆರವೇರಿಸಬೇಕೆಂಬ ಕಾಯಿದೆಯನ್ನು ಮಾಡುತ್ತದೆ. ಈ ಕಾಯಿದೆಯು ಸಿಂಧುವೇ ?

**V Semester 5 Year B.A.LL.B.(Maj.-Min.System)/B.Com.LL.B./B.B.A.LL.B. Examination, September/October 2023 (June 2023)**
**CONSTITUTIONAL LAW – I**

Duration : 3 Hours Max. Marks : 100

**Instructions : 1. Answer Q. No. 9 and any five of the remaining questions.**
**2. Q. No. 9 carries 20 marks and the remaining questions carry 16 marks each.**
**3. Answers should be written either in English or Kannada completely.**

Q. No. 1. Can the Indian Constitution be labelled as Federal Constitution? Marks : 16

ಭಾರತದ ಸಂವಿಧಾನವನ್ನು ಸಂಯುಕ್ತ ಸಂವಿಧಾನವೆಂದು ಕರೆಯಬಹುದೇ ?

Q. No. 2. Explain the law relating to citizenship. Marks : 16

ಪೌರತ್ವದ ಬಗೆಗೆ ಇರುವ ಕಾನೂನುಗಳನ್ನು ವಿವರಿಸಿ.

Q. No. 3. Explain "State" under Article 12 of the Constitution. Refer to decided cases. Marks : 16

ಸಂವಿಧಾನದ ವಿಧಿ 12 ರ ಪ್ರಕಾರ ''ರಾಜ್ಯ'' ವನ್ನು ವಿವರಿಸಿ. ನಿರ್ಣಯಿಸಿದ ತೀರ್ಪುಗಳನ್ನು ಉಲ್ಲೇಖಿಸಿರಿ.

Q. No. 4. Critically examine "The Constitution of India provides for protective discrimination under Article 16". Marks : 16

''ಭಾರತೀಯ ಸಂವಿಧಾನವು 16 ನೇ ವಿಧಿಯನ್ವಯ ರಕ್ಷಣಾತ್ಮಕ ತಾರತಮ್ಯತೆಗೆ ಅನುಮತಿ ಮಾಡಿಕೊಟ್ಟಿದೆ.'' ಈ ಹೇಳಿಕೆಯನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

Q. No. 5. Explain the Constitutional safeguards provided in favour of an accused person. Marks : 16

ಆಪಾದಿತನ ಪರವಾಗಿ ಸಂವಿಧಾನಾತ್ಮಕ ರಕ್ಷಣೆಗಳನ್ನು ವಿವರಿಸಿ.

Q. No. 6. What are the rights of minorities under the Indian Constitution ? Marks : 16

ಭಾರತದ ಸಂವಿಧಾನದಡಿಯಲ್ಲಿ ಅಲ್ಪಸಂಖ್ಯಾತರ ಹಕ್ಕುಗಳಾವುವು ?

P.T.O.

Q. No. 7. Explain the right to Constitutional remedies with special reference to different writs. Marks : 16

ವಿವಿಧ ರಿಟ್‌ಗಳ ಉಲ್ಲೇಖದೊಂದಿಗೆ ಸಂವಿಧಾನಾತ್ಮಕ ಪರಿಹಾರಗಳ ಹಕ್ಕನ್ನು ವಿವರಿಸಿರಿ.

Q. No. 8. Write a short note on **any two** of the following : Marks : 8×2=16

ಯಾವುದಾದರೂ ಎರಡಕ್ಕೆ ಲಘು ಟಿಪ್ಪಣಿ ಬರೆಯಿರಿ :

(a) Fundamental duties.

ಮೂಲಭೂತ ಕರ್ತವ್ಯಗಳು.

(b) Doctrine of eclipse.

ಗ್ರಹಣ ಸಿದ್ಧಾಂತ.

(c) Can Preamble be amended ?

ಪ್ರಸ್ತಾವನೆಯನ್ನು ತಿದ್ದುಪಡಿ ಮಾಡಬಹುದೇ ?

Q. No. 9. Solve **any two** of the following problems with reasons : Marks : 2×10=20

ಕೆಳಗಿನ ಯಾವುದಾದರೂ **ಎರಡಕ್ಕೆ** ಕಾರಣಗಳೊಂದಿಗೆ ಪರಿಹಾರ ಸೂಚಿಸಿರಿ.

(a) Some foreign nationals came to India for Christian missionary work and stayed in India for more than 5 years immediately before the commencement of the Constitution. They stayed on the basis of foreign passport and residential permit. Can they acquire citizenship by domicile ?

ಕೆಲವು ವಿದೇಶಿ ಪ್ರಜೆಗಳು ಕ್ರಿಶ್ಚಿಯನ್ ಮಿಷನರಿ ಕೆಲಸಕ್ಕಾಗಿ ಭಾರತಕ್ಕೆ ಬಂದು 5 ವರ್ಷಕ್ಕೂ ಹೆಚ್ಚು ಕಾಲ ಸಂವಿಧಾನದ ಪ್ರಾರಂಭಕ್ಕೆ ಮುಂಚಿತವಾಗಿ ಭಾರತದಲ್ಲಿ ನೆಲೆಸಿದ್ದರು. ಅವರು ವಿದೇಶಿ ಪಾಸ್ಪೋರ್ಟ್ ಮತ್ತು ವಸತಿ ಪರವಾನಿಗೆ ಆಧಾರದ ಮೇಲೆ ಉಳಿದರು. ಅವರು ನಿವಾಸಗಳ ಮೂಲಕ ಪೌರತ್ವವನ್ನು ಪಡೆದುಕೊಳ್ಳಬಹುದೇ ?

(b) The Government of Karnataka acquired the land of 'B' by law. 'B' wants to challenge the said acquisition by way of writ. Can 'B' succeed ?

ಕರ್ನಾಟಕ ಸರ್ಕಾರವು ಸೂಕ್ತ ಕಾನೂನಿನ ಮೂಲಕ 'B' ಯ ಭೂಮಿಯನ್ನು ಭೂಸ್ವಾಧೀನ ಮಾಡಿಕೊಳ್ಳುತ್ತದೆ. 'B' ಯು ಈ ಸ್ವಾಧೀನತೆಯನ್ನು ರಿಟ್ ಮೂಲಕ ಪ್ರಶ್ನಿಸಲು ಇಚ್ಛಿಸುತ್ತಾನೆ. 'B' ಯು ಗೆಲ್ಲುವನೇ ?

(c) Of the legislature passes a law that citizens should not approach the Supreme Court directly for the enforcement of fundamental rights. But they should first seek remedy in the high court and then if parties are dissatisfied with the judgement of the High Court, can approach the Supreme Court by way of appeal. Can this attempt of the legislature to curtail the fundamental rights of citizens be justified ?

ಮೂಲಭೂತ ಹಕ್ಕುಗಳನ್ನು ಜಾರಿಗೊಳಿಸಲು ನಾಗರಿಕರು ನೇರವಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ ಬರಬಾರದು, ಆದರೆ ಅವರು ಮೊದಲು ಉಚ್ಚ ನ್ಯಾಯಾಲಯದಲ್ಲಿ ಪರಿಹಾರವನ್ನು ಪಡೆಯಬೇಕು ಮತ್ತು ಪಕ್ಷಗಳು ಉಚ್ಚ ನ್ಯಾಯಾಲಯದ ತೀರ್ಪಿನಿಂದ ಅತೃಪ್ತರಾಗಿದ್ದರೆ, ಸರ್ವೋಚ್ಚ ನ್ಯಾಯಾಲಯವನ್ನು ಮೇಲ್ಮನವಿ ಮೂಲಕ ಸಂಪರ್ಕಿಸಬೇಕು ಎಂದು ಶಾಸಕಾಂಗವು ಕಾಯಿದೆ ಮಾಡಿದರೆ ಏನಾಗುತ್ತದೆ. ನಾಗರಿಕರ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸಲು ಶಾಸಕಾಂಗದ ಈ ಪ್ರಯತ್ನವನ್ನು ಸಮರ್ಥಿಸಬಹುದೇ ?

**Fifth Semester 5 Year B.A. LL.B. (Maj.-Min. System)/B.B.A. LL.B./B.Com. LL.B Examination, March/April 2023 (Dec. 2022)**
**(2016 – 17 Batch Students)**
**CONSTITUTIONAL LAW – I**

Duration : 3 Hours Max. Marks : 100

**Instructions : 1. Answer Q. No. 9 and any five of the remaining questions.**
**2. Q. No. 9 carries 20 marks and the remaining questions carry 16 marks each.**
**3. Answers should be written in English or Kannada completely.**

Q. No. 1. Discuss the values enshrined in the Preamble of the Indian Constitution. Is the Preamble a part of the Constitution ? Marks : 16

ಭಾರತದ ಸಂವಿಧಾನದ ಪೀಠಿಕೆಯಲ್ಲಿ ಅಳವಡಿಸಲಾದ ಮೌಲ್ಯಗಳನ್ನು ಚರ್ಚಿಸಿ. ಪೀಠಿಕೆಯು ಸಂವಿಧಾನದ ಒಂದು ಭಾಗವೇ ?

Q. No. 2. "The State shall not deny any citizen equality before law or the equal protection of the laws". Discuss by referring to judicial decisions. Marks : 16

ರಾಜ್ಯವು ಯಾವುದೇ ವ್ಯಕ್ತಿಗೆ ಕಾನೂನಿನ ಮುಂದೆ ಸಮಾನತೆ ಅಥವಾ ಕಾನೂನುಗಳಿಂದ ಸಮಾನ ಸಂರಕ್ಷಣೆಯನ್ನು ನಿರಾಕರಿಸಬಾರದು''. ಈ ಹೇಳಿಕೆಯನ್ನು ನ್ಯಾಯಿಕ ನಿರ್ಣಯಗಳೊಂದಿಗೆ ಚರ್ಚಿಸಿ.

Q. No. 3. Explain the freedom of speech and expression under the Constitution of India. Marks : 16

ಭಾರತದ ಸಂವಿಧಾನದಲ್ಲಿರುವ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ವಿವರಿಸಿ.

Q. No. 4. Examine the freedom of religion guaranteed under the Indian Constitution. Marks : 16

ಭಾರತದ ಸಂವಿಧಾನದಲ್ಲಿ ಖಾತ್ರಿಗೊಳಿಸಲಾದ ಧರ್ಮದ ಸ್ವಾತಂತ್ರ್ಯವನ್ನು ಪರೀಕ್ಷಿಸಿ.

Q. No. 5. Examine the constitutional remedies for the enforcement of fundamental rights under the Constitution of India. Marks : 16

ಭಾರತದ ಸಂವಿಧಾನದಡಿಯಲ್ಲಿ ಮೂಲಭೂತ ಹಕ್ಕುಗಳನ್ನು ಜಾರಿಗೊಳಿಸಲು ಇರುವ ಸಂವಿಧಾನಿಕ ಪರಿಹಾರಗಳಾವುವು ಎಂಬುದನ್ನು ಪರೀಕ್ಷಿಸಿ.

Q. No. 6. What are the Directive Principles of State Policy ? Can they be enforced in the courts of law ? Marks : 16

ರಾಜ್ಯ ನಿರ್ದೇಶಕ ತತ್ವಗಳು ಯಾವುವು ? ಅವುಗಳನ್ನು ನ್ಯಾಯಾಲಯಗಳ ಮೂಲಕ ಜಾರಿಗೊಳಿಸಬಹುದೆ ?

Q. No. 7. Define the term 'State'. Explain with the help of judicial decisions, the need for widening the definition of 'State'. Marks : 16

'ರಾಜ್ಯ' ಪದವನ್ನು ವ್ಯಾಖ್ಯಾನಿಸಿ. ರಾಜ್ಯದ ವ್ಯಾಖ್ಯಾನವನ್ನು ವಿಸ್ತರಿಸುವ ಅಗತ್ಯವನ್ನು ನ್ಯಾಯಾಂಗ ನಿರ್ಧಾರಗಳ ಸಹಾಯದಿಂದ ವಿವರಿಸಿ.

Q. No. 8. Write short note on **any two** of the following : Marks : 2×8=16

ಕೆಳಗಿನ ಯಾವುದಾದರೂ ಎರಡಕ್ಕೆ ಲಘು ಟಿಪ್ಪಣಿ ಬರೆಯಿರಿ :

(a) Termination of citizenship.

ಪೌರತ್ವದ ಕೊನೆಗೊಳ್ಳುವಿಕೆ.

(b) Double Jeopardy.

ದ್ವಿದಂಡನೆ.

(c) Right to privacy.

ಖಾಸಗಿತನದ ಹಕ್ಕು.

Q. No. 9. Solve **any two** of the following problems : Marks : 2×10=20

ಕೆಳಗಿನ ಯಾವುದಾದರೂ ಎರಡು ಸಮಸ್ಯೆಗಳನ್ನು ಬಗೆಹರಿಸಿ :

(a) The State of Gujarat has imposed 30% entertainment tax on cinema theatres in Metropolitan cities, 20% tax in other cities and 10% tax in rural areas by an act. The constitutional validity of the act is challenged. Decide.

ಗುಜರಾತ್ ರಾಜ್ಯವು ಒಂದು ಶಾಸನದ ಮೂಲಕ ಮೆಟ್ರೋಪಾಲಿಟನ್ ನಗರಗಳಲ್ಲಿಯ ಚಿತ್ರಮಂದಿರಗಳಿಗೆ ಮನರಂಜನಾ ತೆರಿಗೆಯಾಗಿ 30% ತೆರಿಗೆ, ಉಳಿದ ನಗರಗಳಲ್ಲಿದ್ದರೆ 20% ತೆರಿಗೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿದ್ದರೆ 10% ತೆರಿಗೆಯನ್ನು ವಿಧಿಸಿತು. ಈ ಶಾಸನದ ಸಂವಿಧಾನಿಕತೆಯನ್ನು ಪ್ರಶ್ನಿಸಲಾಗಿದೆ. ತೀರ್ಮಾನಿಸಿ.

(b) The State Government detained large number of persons under Narcotic Drugs Act for a long period without trial. 'The undertrial prisoners' questioned the validity on the ground of violation of fundamental rights. Decide.

ಅಮಲುಕಾರಕ ದ್ರವ್ಯದ ಅಧಿನಿಯಮದ ಅಡಿಯಲ್ಲಿ ರಾಜ್ಯ ಸರಕಾರವು ಬಹಳ ಜನರನ್ನು ಅನೇಕ ದಿವಸಗಳವರೆಗೆ ವಿಚಾರಣೆಯಿಲ್ಲದೆ ಬಂಧನದಲ್ಲಿಡಲಾಗಿತ್ತು. ವಿಚಾರಣಾಧೀನಗೊಳಪಟ್ಟವರು ಸರಕಾರದ ಈ ಕ್ರಮವನ್ನು ತಮಗಿರುವ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ಪ್ರಶ್ನಿಸಲಾಗಿದೆ. ತೀರ್ಮಾನಿಸಿ.

(c) An accused was compelled by police authorities to accept that he committed an offence under a law. Does it amount to violation of his rights ? Decide.

ಒಬ್ಬ ಆರೋಪಿಯನ್ನು ಅಪರಾಧ ಮಾಡಿರುವುದನ್ನು ಒಪ್ಪಿಕೊಳ್ಳಲು ಪೋಲಿಸ್ ಅಧಿಕಾರಿಗಳು ಒತ್ತಡ ಹೇರುತ್ತಾರೆ. ಇದು ಅವನ ಮೂಲಭೂತ ಹಕ್ಕಿನ ಉಲ್ಲಂಘನೆಯಾಗುತ್ತದೆಯೇ ? ನಿರ್ಧರಿಸಿರಿ.

---

**V Semester 5 Years B.A.LL.B. (Maj.-Min. System) /B.B.A.LL.B./B.Com.LL.B. Examination, October/November 2022 (June 2022)**
**(2016 – 17/2017 –18 Batch)**
**CONSTITUTIONAL LAW – I**

Duration : 3 Hours Max. Marks : 100

**Instructions : 1. Answer Q.No. 9 and any five of the remaining.**
**2. Q.No.9 carries 20 marks and the remaining questions carry 16 marks each.**
**3. Answers should be written either in English or Kannada completely.**

Q. No. 1. What is Constitution ? Indian Constitution is federal with unitary features – Comment. Marks : 16
ಸಂವಿಧಾನ ಎಂದರೇನು ? ಭಾರತದ ಸಂವಿಧಾನವು ಕೇಂದ್ರೀಕೃತ ಲಕ್ಷಣಗಳುಳ್ಳ ಸಂಯುಕ್ತ ಸಂವಿಧಾನ – ವಿಮರ್ಶಿಸಿ.

Q. No. 2. Discuss the principle of equality as enshrined in Article 14 of the Constitution of India with decided cases. Marks : 16
ಭಾರತದ ಸಂವಿಧಾನದ ಅನುಚ್ಛೇದ 14ರಲ್ಲಿ ಅಡಕವಾಗಿರುವ ಸಮಾನತೆಯ ಉಪಬಂಧವನ್ನು ನಿರ್ಧರಿತ ಪ್ರಕರಣಗಳೊಂದಿಗೆ ಚರ್ಚಿಸಿ.

Q. No. 3. Explain the fundamental right to freedom of speech and expression with its limitations. Marks : 16
ಮೂಲಭೂತ ಹಕ್ಕು ಆದ ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಅದರ ಮಿತಿಗಳೊಂದಿಗೆ ವಿವರಿಸಿ.

Q. No. 4. 'No person can be deprived of his right to life and personal liberty except according to due process of law'. Examine. Marks : 16
'ಯಾವುದೇ ವ್ಯಕ್ತಿಯ ಜೀವ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಹಕ್ಕನ್ನು ವಿಧಿವಿಹಿತವಾದ ಪ್ರಕ್ರಿಯೆ ಹೊರತಾಗಿ ಬೇರಾವುದೇ ರೀತಿಯಲ್ಲಿ ನಿರಾಕರಿಸುವಂತಿಲ್ಲ'. ಪರೀಕ್ಷಿಸಿ.

Q. No. 5. 'Directive Principles have remained weak due to its unenforceability nature'. Discuss. Marks : 16

'ನಿರ್ದೇಶನಾತ್ಮಕ ತತ್ವಗಳು ಜಾರಿಗೊಳಿಸಲಾಗದ ಸ್ವರೂಪದಿಂದಾಗಿ ದುರ್ಬಲವಾಗಿಯೇ ಉಳಿದುಕೊಂಡಿದೆ'. ಚರ್ಚಿಸಿ.

Q. No. 6. Explain the doctrines to resolve the state of laws being inconsistent with the Constitution. Marks : 16

ಕಾನೂನುಗಳು ಸಂವಿಧಾನಕ್ಕೆ ವ್ಯತಿರಿಕ್ತವಾಗಿದ್ದಲ್ಲಿ ಪರಿಹರಿಸಲು ಇರುವ ತತ್ವಗಳನ್ನು ವಿವರಿಸಿ.

Q. No. 7. Explain the rights of minorities establish and manage educational institutions. Marks : 16

ಅಲ್ಪ ಸಂಖ್ಯಾತ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವ ಮತ್ತು ನಿರ್ವಹಿಸುವ ಹಕ್ಕನ್ನು ವಿವರಿಸಿ.

Q. No. 8. Write a note on **any two** of the following. Marks : 2×8=16

ಈ ಕೆಳಗಿನ ಎರಡಕ್ಕೆ ಟಿಪ್ಪಣಿ ಬರೆಯಿರಿ.

(a) Ex post facto law

ಎಕ್ಸ್ ಪೋಸ್ಟ್ ಫೇಕ್ಟೊ ಲಾ

(b) Writ of Quo Warranto

ಕ್ವೊ ವಾರೆಂಟೋ ರಿಟ್

(c) Fundamental Duties

ಮೂಲಭೂತ ಕರ್ತವ್ಯಗಳು

Q. No. 9. Solve **any two** of the following problems. Marks : 2×10=20

ಈ ಕೆಳಗಿನ ಯಾವುದಾದರೂ ಎರಡು ಸಮಸ್ಯೆಗಳನ್ನು ಬಗೆಹರಿಸಿ.

(a) The General Manager of KSRTC (Karnataka State Road Transport Corporation) was authorised by the Government to conduct inspection of vehicles to examine vehicles documents and pollution level checks. An order to this effect was passed by the Government of Karnataka. This was challenged by the association of private operators as infringement of fundamental rights. Decide.

ಕರ್ನಾಟಕ ಸರಕಾರವು ಒಂದು ಸರ್ಕಾರೀ ಆದೇಶದ ಮುಖಾಂತರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಪ್ರಧಾನ ವ್ಯವಸ್ಥಾಪಕರನ್ನು ವಾಹನದ ದಾಖಲೆಗಳು ಮತ್ತು ಮಾಲಿನ್ಯ ಮಿತಿ ಪರೀಕ್ಷೆ ಮುಂತಾದವುಗಳನ್ನು ತಪಾಸಣೆ ನಡೆಸುವ ಅಧಿಕಾರಕ್ಕೊಳಪಡಿಸಿತು. ಖಾಸಗಿ ವಾಹನಗಳ ಮಾಲಿಕರ ಸಂಘವು ಈ ಆದೇಶವನ್ನು ಮೂಲಭೂತ ಹಕ್ಕಿನ ಉಲ್ಲಂಘನೆ ಎಂದು ಪ್ರಶ್ನಿಸುತ್ತಾರೆ. ನಿರ್ಧರಿಸಿ.

(b) A, was detained by the Police Inspector under Preventive Detention Act, 1950. The grounds of detention was drawn in English which the detenue was unaware. The detention order states that the officer which serving the grounds of detention explained the grounds in Tamil to the detenue. But no translation of the grounds into Tamil was given to the detenue. The detenue challenged the same. Decide.

A, ಎಂಬವರನ್ನು ಪೊಲೀಸ್ ಅಧಿಕಾರಿಯು ಪ್ರತಿಬಂಧಕ ಬಂಧನ ಕಾಯ್ದೆ 1950ರ ಅಡಿಯಲ್ಲಿ ಬಂಧಿಸುತ್ತಾರೆ. ಬಂಧನದ ಕಾರಣಗಳನ್ನು ಆಂಗ್ಲ ಭಾಷೆಯಲ್ಲಿ ರಚಿಸಲಾಗಿತ್ತು. ಆದರೆ ಬಂಧಿಸಲ್ಪಟ್ಟ ವ್ಯಕ್ತಿ ಈ ಭಾಷೆಯು ತಿಳಿದಿರಲಿಲ್ಲ. ಬಂಧನ ಕಾರಣವನ್ನು ಬಂಧಿತ ವ್ಯಕ್ತಿಗೆ ನೀಡುವಾಗ ಕೇವಲ ಅದರ ವಿವರಣೆಯನ್ನು ಬಂಧಿತ ವ್ಯಕ್ತಿಯು ಭಾಷೆಯಾದ ತಮಿಳಿನಲ್ಲಿ ನೀಡಲಾಯಿತು. ಆದರೆ ಬಂಧನದ ಆದೇಶದಲ್ಲಿರುವ ಕಾರಣಗಳನ್ನು ತಮಿಳು ಭಾಷೆಯಲ್ಲಿ ಅನುವಾದ ಮಾಡಿ ಕೊಟ್ಟಿರುವುದಿಲ್ಲ. ಬಂಧಿಸಲ್ಪಟ್ಟ ವ್ಯಕ್ತಿಯು ಪ್ರಶ್ನಿಸುತ್ತಾನೆ. ನಿರ್ಧರಿಸಿ.

(c) C was terminated from Railway service as per the service rules since it was found that he was a member of Congress Party and also a member of a registered Trade Union. C, the appellant challenged the termination as ultravires the Constitution. Decide.

C ಎಂಬವರನ್ನು ರೈಲ್ವೇ ಸೇವಾ ನಿಯಮಾವಳಿಗಳ ಪ್ರಕಾರ ಕಾಂಗ್ರೇಸ್ ಪಕ್ಷದ ಸದಸ್ಯನಾಗಿದ್ದಕ್ಕೆ ಮತ್ತು ನೋಂದಣಿಸಲ್ಪಟ್ಟ ಕಾರ್ಮಿಕ ಸಂಘಟನೆಯ ಸದಸ್ಯನಾಗಿರುವ ಕಾರಣ ರೈಲ್ವೆ ಉದ್ಯೋಗದಿಂದ ವಜಾ ಮಾಡಲಾಯಿತು. C ರವರು ಈ ಕ್ರಮದ ವಿರುದ್ಧ ಸಂವಿಧಾನದ ಮಿತಿ ಮೀರಿರುವ ಕ್ರಮ ಎಂದು ಅಪೀಲು ಮಾಡುತ್ತಾರೆ. ನಿರ್ಧರಿಸಿ.

---

2070

V Semester 5 Year B.Com.LL.B./B.A.LL.B. (Maj.-Min. System)/B.B.A.LL.B.
Examination, April/May 2022 (Dec. 2021)
**CONSTITUTIONAL LAW – I**
**(2016-17 Batch Students)**

Duration : 3 Hours Max. Marks : 100

**Instructions : 1. Answer Q. No. 11 and any five of the remaining.**
**2. Q. No. 11 carries 20 marks and the remaining questions carry 16 marks each.**
**3. Answers should be written either in English or Kannada Completely.**

Q. No. 1. Examine the salient features of the Constitution of India. Marks : 16
ಭಾರತ ಸಂವಿಧಾನದ ಮುಖ್ಯ ಲಕ್ಷಣಗಳನ್ನು ಪರೀಕ್ಷಿಸಿ.

Q. No. 2. Define the term "State". Explain with the help of judicial decisions, the need for widening the definition of "State". Marks : 16
"ರಾಜ್ಯ" ಪದವನ್ನು ವ್ಯಾಖ್ಯಾನಿಸಿ. "ರಾಜ್ಯ"ದ ವ್ಯಾಖ್ಯಾನವನ್ನು ವಿಸ್ತರಿಸುವ ಅಗತ್ಯವನ್ನು ನ್ಯಾಯಾಂಗ ನಿರ್ಣಯಗಳ ಸಹಾಯದಿಂದ ವಿವರಿಸಿ.

Q. No. 3. Does Art. 14 permit classification ? If so, refer to the basis on which it is permissible. Marks : 16
ಅನುಚ್ಛೇದ 14 ವರ್ಗೀಕರಣಕ್ಕೆ ಅವಕಾಶ ಕೊಡುತ್ತದೆಯೇ ? ಹಾಗಿದ್ದಲ್ಲಿ ಯಾವ ಆಧಾರಗಳ ಮೇಲೆ ಅವಕಾಶವಿದೆ ಎಂಬುದನ್ನು ಉಲ್ಲೇಖಿಸಿ.

Q. No. 4. Discuss the freedom of speech and expression with the help of the decided cases. Marks : 16
ನಿರ್ಣಯಿಸಲ್ಪಟ್ಟ ಪ್ರಕರಣಗಳ ಸಹಾಯದಿಂದ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಚರ್ಚಿಸಿರಿ.

Q. No. 5. Discuss the rights of minorities to establish and manage the educational institutions. Marks : 16
ಅಲ್ಪ ಸಂಖ್ಯಾತರ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವ ಮತ್ತು ಅವುಗಳನ್ನು ನಿರ್ವಹಿಸುವ ಹಕ್ಕುಗಳನ್ನು ಚರ್ಚಿಸಿ.

P.T.O.

Q. No. 6. Examine the freedom of religion guaranteed under the Indian Constitution. Marks : 16

ಭಾರತದ ಸಂವಿಧಾನದಲ್ಲಿ ನೀಡಲಾದ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಪರೀಕ್ಷಿಸಿ.

Q. No. 7. Explain the safeguards available against the arbitrary arrest and detention under Art. 22 of the Indian Constitution. Marks : 16

ಭಾರತ ಸಂವಿಧಾನದ 22 ರ ಪರಿಚ್ಛೇದದಲ್ಲಿ ದೊರೆಯುವ ಸ್ವೇಚ್ಛಾನುಸಾರ ದಸ್ತಗಿರಿ ಮತ್ತು ಬಂಧನದ ವಿರುದ್ಧ ಇರುವ ರಕ್ಷಣೆಗಳನ್ನು ವಿವರಿಸಿರಿ.

Q. No. 8. Narrate the safeguards available to the accused persons under Article 20 of the Constitution of India.

ಭಾರತದ ಸಂವಿಧಾನದ ಅನುಚ್ಛೇದ 20 ರಲ್ಲಿ ಆಪಾದಿತ ವ್ಯಕ್ತಿಗಳಿಗೆ ಇರುವ ರಕ್ಷಣೆಗಳನ್ನು ನಿರೂಪಿಸಿ.

Q. No. 9. 'Freedom of profession, occupation, trade or business given under Article 19(1)(g) of the Constitution is not absolute'. Discuss.

'ಸಂವಿಧಾನದ ಅನುಚ್ಛೇದ 19(1)(ಜಿ)ಯಲ್ಲಿ ನೀಡಿರುವ ವೃತ್ತಿ, ಉದ್ಯೋಗ, ವ್ಯಾಪಾರ ಅಥವಾ ವ್ಯವಹಾರ ಸ್ವತಂತ್ರತೆಯೂ ನಿರಂಕುಶವಾಗಿರುವುದಿಲ್ಲ.' ಚರ್ಚಿಸಿರಿ.

Q. No. 10. Write short note on **any two** of the following : Marks : 2×8=16

ಯಾವುದಾದರೂ **ಎರಡಕ್ಕೆ** ಲಘುಟಿಪ್ಪಣಿ ಬರೆಯಿರಿ :

(a) "Fundamental Duties".

"ಮೂಲಭೂತ ಕರ್ತವ್ಯಗಳು".

(b) Abolition of untouchability.

ಅಸ್ಪೃಶ್ಯತೆಯ ನಿರ್ಮೂಲನೆ.

(c) 'Citizenship'.

'ಪೌರತ್ವ'.

Q. No. 11. Solve **any two** of the following problems with reasons : Marks : 2×10=20
ಕೆಳಗಿನ ಯಾವುದಾದರೂ ಎರಡಕ್ಕೆ ಕಾರಣಗಳೊಂದಿಗೆ ಪರಿಹಾರ ಸೂಚಿಸಿರಿ :

(a) In view of the Bar Council of India's New Regulations 2009, Karnataka state law university also made a regulation fixing 30 year's age limit for 3 year LL.B., degree and 25 year's age limit for 5 year LL.B. degree for admission. Decide the reasonableness of the rule in the context of Right to Education.

ಬಾರ್ ಕೌನ್ಸಿಲ್ ಆಫ್ ಇಂಡಿಯಾ ಇವರು 2009 ರ ರೆಗ್ಯುಲೇಷನ್ ಅನ್ವಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯವು ನಿಯಮಗಳನ್ನು ರಚಿಸಿ 3 ವರ್ಷದ ಕಾನೂನು ಪದವಿಗೆ 30 ವರ್ಷಗಳು ಹಾಗೂ 5 ವರ್ಷದ ಕಾನೂನು ಪದವಿಗೆ 25 ವರ್ಷಗಳ ಒಳಗಿದ್ದಲ್ಲಿ ವ್ಯಕ್ತಿ ಪ್ರವೇಶ ಪಡೆಯಬಹುದೆಂದಿದೆ. ಶಿಕ್ಷಣ ಪಡೆಯುವುದು ಮೂಲಭೂತ ಹಕ್ಕು ಎಂಬ ಹಿನ್ನೆಲೆಯಲ್ಲಿ ಈ ನಿಯಮಾವಳಿಗಳ ಯುಕ್ತತೆಯ ಬಗ್ಗೆ ನಿರ್ಧರಿಸಿರಿ.

(b) A mother, whose son was killed in Police custody of a state 'B', files a writ against the state under Art. 32 and claims compensation on the ground of violation of Art. 21. The state argues that it was discharging sovereign function and hence not liable to compensate. Decide.

'ಬ' ರಾಜ್ಯದ ಪೋಲಿಸರ ಅಧಿರಕ್ಷೆಯಲ್ಲಿ ಸಾವಿಗೀಡಾದ ಮಗನ ತಾಯಿಯು ರಾಜ್ಯದ ವಿರುದ್ಧ ಅನುಚ್ಛೇದ 32ರ ಅಡಿಯಲ್ಲಿ ರಿಟ್ ಅರ್ಜಿ ಸಲ್ಲಿಸಿ ಅನುಚ್ಛೇದ 21ರ ಉಲ್ಲಂಘನೆಯ ಆಧಾರದ ಮೇಲೆ ಪರಿಹಾರವನ್ನು ಕೋರುವಳು. ರಾಜ್ಯವು ತಾನು ಸಾರ್ವಭೌಮ ಕಾರ್ಯ ನಿರ್ವಹಣೆಯಲ್ಲಿ ತೊಡಗಿತ್ತೆಂದೂ ಮತ್ತು ಹೀಗಾಗಿ ತಾನು ಪರಿಹಾರ ನೀಡಲು ಹೊಣೆಗಾರನಲ್ಲವೆಂದೂ ವಾದಿಸುವುದು. ನಿರ್ಧರಿಸಿರಿ.

(c) The University of Punjab declared Punjabi as the sole medium of instruction in the affiliated colleges. The management of a college challenges the action of the Punjab University. Decide.

ಪಂಜಾಬ್ ವಿಶ್ವವಿದ್ಯಾಲಯವು ತನ್ನ ಎಲ್ಲ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಪಂಜಾಬಿ ಭಾಷೆಯನ್ನು ಏಕಮಾತ್ರ ಶಿಕ್ಷಣ ಮಾಧ್ಯಮವೆಂದು ಘೋಷಿಸಿತು. ಒಂದು ಮಹಾವಿದ್ಯಾಲಯದ ಆಡಳಿತ ಮಂಡಳಿಯವರು ಪಂಜಾಬ್ ವಿಶ್ವವಿದ್ಯಾಲಯದ ಈ ಕ್ರಮವನ್ನು ಪ್ರಶ್ನಿಸುತ್ತಾರೆ. ನಿರ್ಣಯಿಸಿರಿ.

---

**V Semester 5 Year B.A.,LL.B. (Maj.-Min. System)/B.Com.LL.B./B.B.A.LL.B.**
**Examination, Oct./Nov. 2021**
**CONSTITUTIONAL LAW – I**

Duration : 3 Hours  Max. Marks : 100

**Instructions : 1. Answer Q. No. 11 and any five of the remaining questions.**
**2. Q. No. 11 carries 20 marks and the remaining questions carry 16 marks each.**
**3. Answers should be written either in English or Kannada completely.**

Q. No. 1. Explain the nature and special features of Constitution of India. Marks : 16
ಭಾರತ ಸಂವಿಧಾನದ ಸ್ವರೂಪ ಮತ್ತು ವಿಶಿಷ್ಟ ಲಕ್ಷಣಗಳನ್ನು ವಿವರಿಸಿ.

Q. Np. 2. The expression "Life" and "Personal liberty" under Art. 21 of the Indian Constitution are of widest amplitude and Cover infinite volume of Rights. – Elucidate. Marks : 16
ಭಾರತ ಸಂವಿಧಾನದ ಅನುಚ್ಛೇದ 21 ರ ಅಡಿಯಲ್ಲಿ ''ಜೀವ'' ಮತ್ತು ''ವೈಯಕ್ತಿಕ ಸ್ವಾತಂತ್ರ್ಯ'' ಎಂಬ ಪದವಿನ್ಯಾಸ ಬಹು ವಿಸ್ತಾರವಾದವುಗಳು ಮತ್ತು ಕೊನೆಯಿಲ್ಲದ ವೈವಿಧ್ಯ ಹಕ್ಕುಗಳನ್ನು ಒಳಗೊಂಡಿರುತ್ತದೆ. ವಿಶದೀಕರಿಸಿ.

Q. No. 3. Discuss in brief the Fundamental Freedoms guaranteed to the citizens under Art. 19 of the Constitution of India. Marks : 16
ಭಾರತದ ಸಂವಿಧಾನದ ಅನುಚ್ಛೇದ 19 ರಲ್ಲಿ ನಾಗರೀಕರಿಗಿರುವ ಮೂಲಭೂತ ಸ್ವಾತಂತ್ರ್ಯದ ಹಕ್ಕುಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿರಿ.

Q. No. 4. Examine the Constitutional remedies for the enforcement of Fundamental Rights under the Constitution of India. Marks : 16
ಭಾರತದ ಸಂವಿಧಾನದಡಿಯಲ್ಲಿ ಮೂಲಭೂತ ಹಕ್ಕುಗಳನ್ನು ಜಾರಿಗೊಳಿಸಲು ಇರುವ ಸಾಂವಿಧಾನಿಕ ಪರಿಹಾರಗಳಾವುವು ಎಂಬುದನ್ನು ಪರೀಕ್ಷಿಸಿ.

Q. No. 5. Discuss the principles of equality as laid under Article 14 of the Indian Constitution. Marks : 16
ಭಾರತ ಸಂವಿಧಾನದ ಅನುಚ್ಛೇದ 14 ರಲ್ಲಿ ಹೇಳಿರುವ ಸಮಾನತೆಯ ತತ್ವಗಳನ್ನು ಚರ್ಚಿಸಿರಿ.

P.T.O.

Q. No. 6. Discuss the Rights of minorities under the provisions of Articles 29 and 30 of the Indian Constitution. Marks : 16

ಭಾರತ ಸಂವಿಧಾನದ 29 ಮತ್ತು 30 ನೇ ಅನುಚ್ಛೇದಗಳ ಅನ್ವಯ ಅಲ್ಪಸಂಖ್ಯಾತರಿಗೆ ದೊರೆಯುವ ಹಕ್ಕುಗಳನ್ನು ಕುರಿತು ಚರ್ಚಿಸಿ.

Q. No. 7. Define the term "State". Explain with the help of Judicial decisions the need for widening the definition of "State". Marks : 16

"ರಾಜ್ಯ" ಪದವನ್ನು ವ್ಯಾಖ್ಯಾನಿಸಿ. ರಾಜ್ಯದ ವ್ಯಾಖ್ಯಾನವನ್ನು ವಿಸ್ತರಿಸುವ ಅಗತ್ಯವನ್ನು ನ್ಯಾಯಾಂಗ ನಿರ್ಣಯಗಳ ಸಹಾಯದಿಂದ ವಿವರಿಸಿ.

Q. No. 8. Explain Right to Religion in the Constitution of India. Marks : 16

ಭಾರತದ ಸಂವಿಧಾನದಲ್ಲಿ ಧಾರ್ಮಿಕತೆಯ ಹಕ್ಕನ್ನು ವಿವರಿಸಿ.

Q. No. 9. What are the Constitutional protection available against conviction ? Explain. Marks : 16

ಶಿಕ್ಷೆಯ ವಿರುದ್ಧ ಲಭ್ಯವಿರುವ ಸಂವಿಧಾನಿಕ ರಕ್ಷಣೆಗಳು ಯಾವುವು ? ವಿವರಿಸಿ.

Q. No. 10. Write short note on **any two** of the following : Marks : 2×8=16

ಕೆಳಗಿನ ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

(a) "Preamble".

"ಪ್ರಸ್ತಾವನೆ".

(b) Writ of Habeas Corpus.

ಹೇಬಿಯಸ್ ಕಾರ್ಪಸ್ ರಿಟ್.

(c) Doctrine of Eclipse.

ಗ್ರಹಣ ಸಿದ್ಧಾಂತ.

Q. No. 11. Solve **any two** of the following problems with reasons : Marks : 2×10=20

ಕೆಳಗಿನ ಯಾವುದಾದರೂ **ಎರಡಕ್ಕೆ** ಕಾರಣಗಳೊಂದಿಗೆ ಪರಿಹಾರ ಸೂಚಿಸಿರಿ :

(a) A State passes a law requiring the "Archakas" of temples to conduct worship in the vernacular language, instead of Sanskrit. Is it valid ?

ಒಂದು ರಾಜ್ಯವು ತನ್ನ ರಾಜ್ಯದಲ್ಲಿರುವ ದೇವಾಲಯಗಳ "ಅರ್ಚಕರು" ಸಂಸ್ಕೃತದ ಬದಲಾಗಿ ಪ್ರಾದೇಶಿಕ ಭಾಷೆಯಲ್ಲಿಯೇ ಪೂಜೆ ನೆರವೇರಿಸಬೇಕೆಂಬ ಕಾಯಿದೆಯನ್ನು ಮಾಡುತ್ತದೆ. ಈ ಕಾಯಿದೆಯು ಸಿಂಧುವೇ ?

(b) "A" an accused in a criminal case is asked to produce a document in his possession which is in his handwriting for the purpose of comparison of his handwriting. "A" refuses to produce the same on the ground that he can not be compelled to be a witness against himself. Advise him.

ಒಂದು ಕ್ರಿಮಿನಲ್ ಪ್ರಕರಣದಲ್ಲಿ ಆರೋಪಿತನಾಗಿರುವ "ಅ"ನು ತನ್ನ ಸ್ವಾಧೀನದಲ್ಲಿರುವ ಹಾಗೂ ಅವನದೇ ಕೈ ಬರಹದಲ್ಲಿರುವ ಒಂದು ದಸ್ತಾವೇಜನ್ನು ಅವನ ಕೈ ಬರಹ ಹೋಲಿಕೆ ಮಾಡಲು ನ್ಯಾಯಾಲಯಕ್ಕೆ ಹಾಜರು ಪಡಿಸಲು ಕೇಳಲ್ಪಟ್ಟಿದ್ದಾನೆ. ತನ್ನ ವಿರುದ್ಧವೇ ತನಗೆ ಸಾಕ್ಷಿ ನೀಡಲು ಒತ್ತಾಯಿಸಲು ಬರುವುದಿಲ್ಲ ಎಂಬ ವಾದವನ್ನು ಮಂಡಿಸಿ ಅವನು ಆ ದಸ್ತಾವೇಜನ್ನು ಹಾಜರು ಪಡಿಸಲು ನಿರಾಕರಿಸುತ್ತಾನೆ. ಅವನಿಗೆ ಸಲಹೆ ನೀಡಿರಿ.

(c) "X" a student is rusticated from the school on the ground that he has refused to sing National Anthems. Can "X" challenge it ?

"ಎಕ್ಸ್" ಎನ್ನುವ ವಿದ್ಯಾರ್ಥಿಯು ರಾಷ್ಟ್ರಗೀತೆಯನ್ನು ಹಾಡಲು ನಿರಾಕರಿಸಿದನು ಎನ್ನುವ ಕಾರಣಕ್ಕಾಗಿ ಆತನನ್ನು ಶಾಲೆಯಿಂದ ಹೊರ ಹಾಕಲಾಗುತ್ತದೆ. "ಎಕ್ಸ್"ನು ಅದನ್ನು ಪ್ರಶ್ನಿಸಬಹುದೇ ?

---